16) ಚಾಮರಾಜನಗರ - 1

17) ಕೋಲಾರ - 1

ಆ. ಉತ್ತರ ಕರ್ನಾಟಕದಲ್ಲಿ 23 ಸಕ್ಕರೆ ಕಾರ್ಖಾನೆಗಳು ಇರುತ್ತವೆ (ಬೆಳಗಾಂ ಮತ್ತು ಗುಲ್ಬರ್ಗಾ ವಿಭಾಗಗಳಲ್ಲಿ) ಹಳೆಯ ಮೈಸೂರು ಭಾಗದಲ್ಲಿ 15 ಸಕ್ಕರೆ ಕಾರ್ಖಾನೆಗಳು ಇರುತ್ತವೆ. (ಬೆಂಗಳೂರು ಮತ್ತು ಮೈಸೂರು ವಿಭಾಗಗಳಲ್ಲಿ)

ಇ. ಸರ್ಕಾರ ದಿ: 3-2-2001ರಲ್ಲಿ ಆದೇಶ ಹೊರಡಿಸಿತು.

ಇಲ್ಲ ಉದ್ಭವಿಸುವುದಿಲ್ಲ

ಈ. ಬೆಳಗಾವಿಯ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಕಟ್ಟಡದಲ್ಲಿ ಸಕ್ಕರೆ ನಿರ್ದೇಶನಾಲಯದ ಉದ್ದೇಶಿತ ಕಛೇರಿಯು ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರಿಂದ ದಿ:21-2-2001ರಂದು ಉದ್ಘಾಟಿಸಲ್ಪಟ್ಟಿತ್ತು.

ಉ. ನಿಜ.

ಊ. ನಿಜವಲ್ಲ

ಋ. ಸಕ್ಕರೆ ನಿರ್ದೇಶನಾಲಯವನ್ನು ಬೆಳಗಾವಿಗೆ ಸ್ಥಳಾಂತರಿಸಲು ಸರ್ಕಾರ ಆದೇಶಿಸಿದ ಹಿನ್ನೆಲೆಯಲ್ಲಿ ಕಛೇರಿಯ ಸ್ಥಾಪನೆಗೋಸ್ಕರ ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಕಟ್ಟಡದ ಮೊದಲನೇ ಮಹಡಿಯ ಜಾಗವನ್ನು ತಿಂಗಳಿಗೆ ರೂ.16,800-00 ಬಾಡಿಗೆ ಕರಾರಿನ ಮೇಲೆ ತೆಗೆದುಕೊಳ್ಳಲು ಉದ್ದೇಶಿಸಲಾಗಿತ್ತು. ಈ ಬಾಬ್ತು ಬ್ಯಾಂಕಿಗೆ 2001ರ ಮೇ ಮಾಹೆಯಿಂದ ತಿಂಗಳಿಗೆ ರೂ.16,800-00ರಂತೆ ಬಾಡಿಗೆ ಪಾವತಿಸಬೇಕಾಗುವುದು.

ಕೈ ಮಗ್ಗ ಅಭಿವೃದ್ಧಿ ನಿಗಮದ ಕಛೇರಿಯನ್ನು ಸ್ಥಳಾಂತರಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 408(411)

ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ)

ಉತ್ತರಿಸುವ ಸಚಿವರು : ಶ್ರೀ ಎಂ. ಮಹದೇವ್(ರೇಷ್ಮೆ ಮತ್ತು ಜವಳಿ ಸಚಿವರು)

ಪ್ರಶ್ನೆ

ಅ) ಹುಬ್ಬಳ್ಳಿಯಲ್ಲಿ ಮಂಜೂರಾಗಿದ್ದ ಕೈಮಗ್ಗ ಅಭಿವೃದ್ಧಿ ನಿಗಮದ ನಿರ್ದೇಶನಾಲಯವನ್ನು ಹುಬ್ಬಳ್ಳಿಯಿಂದ ಪುನಃ ಬೆಂಗಳೂರಿಗೆ ಸ್ಥಳಾಂತರಗೊಳಿಸುತ್ತಿರುವ ಸಂಗತಿ ನಿಜವೇ?

ಆ) ಈ ನಿರ್ದೇಶನಾಲಯವನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸುವ ಆದೇಶವನ್ನು ಸರ್ಕಾರದವರು ಎಂದು ಹೊರಡಿಸಿದರು, ಸರ್ಕಾರದ ಆಜ್ಞೆ ಅನುಷ್ಠಾನಕ್ಕೆ ಬಂದಿದೆಯೇ ಹಾಗೂ ಎಂದಿನಿಂದ ಈ ಕಛೇರಿ ಕೆಲಸ ನಿರ್ವಹಿಸುತ್ತಿದೆ?

ಇ) ಉತ್ತರ ಕರ್ನಾಟಕ ಅಭಿವೃದ್ಧಿ ಹೊಂದಬಾರದೆಂಬ ಉದ್ದೇಶದಿಂದ ಕೆಲವು ಬೆಂಗಳೂರು ವ್ಯಾಮೋಹಿ ಐ.ಎ.ಎಸ್. ಅಧಿಕಾರಿಗಳು ಅಸೂಯೆ ಮನೋಭಾವನೆಯಿಂದ ಈ ನಿರ್ದೇಶನಾಲಯದ ಕಛೇರಿಯನ್ನು ಹುಬ್ಬಳ್ಳಿಯಿಂದ ಪುನಃ ಸ್ಥಳಾಂತರಗೊಳಿಸಲು ಪ್ರಯತ್ನಿಸುತ್ತಿರುವ ಸಂಗತಿ ನಿಜವೇ?

ಈ) ಹಾಗಿದ್ದಲ್ಲಿ, ಹಿಂದಿನ ಸರ್ಕಾರದವರು ನಿರ್ಣಯಿಸಿದಂತೆ ಕೈಮಗ್ಗ ನಿರ್ದೇಶನಾಲಯವನ್ನು ಹುಬ್ಬಳ್ಳಿಯಲ್ಲಿ ಕೆಲಸ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಉತ್ತರ

ಅ) ನಿಜವಲ್ಲ

ಆ) ಸರ್ಕಾರದ ಆದೇಶ ಸಂಖ್ಯೆ:ಸಿಐ:238:ಸಿಟಿಹೆಚ್:94 ದಿನಾಂಕ:28.10.1996ರನ್ವಯ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೋಂದಾಯಿತ ಕಛೇರಿಯನ್ನು ಬೆಂಗಳೂರಿನಿಂದ ಹುಬ್ಬಳ್ಳಿಗೆ ಸ್ಥಳಾಂತರಿಸಲಾಗಿದೆ. ಸರ್ಕಾರದ ಈ ಆಜ್ಞೆ ಅನುಷ್ಠಾನಕ್ಕೆ ಬಂದಿದ್ದು 1997ರ ಏಪ್ರಿಲ್ ತಿಂಗಳಿನಿಂದ ನಿಗಮದ ನೋಂದಾಯಿತ ಕಛೇರಿಯು ಹುಬ್ಬಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಇ) ನಿಜವಲ್ಲ

ಈ) ಪ್ರಸಕ್ತ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೋಂದಾಯಿತ ಕಛೇರಿಯು ಹುಬ್ಬಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಕಬ್ಬು ಬೆಳೆಗಾರರಿಗೆ ನೀಡಬೇಕಾದ ಹಣ